ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅಂತಹ ಯೋಜನೆ ಇಲ್ಲ

ಆ) ಮಾಡ್ಯುಲಾರ್ ಎಂಪ್ಲಾಯೆಬಲ್ ಸ್ಕಿಲ್ ಯೋಜನೆಯನ್ನು ರೂಪಿಸಲಾಗುತ್ತಿದೆ.

641 (1009) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :–ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ನೆರೆ ರಾಜ್ಯವಾದ ಕೇರಳದಲ್ಲಿ ಉನ್ನತ ಶಿಕ್ಷಣದ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯಕ್ಕಿಂತ ಹೆಚ್ಚು ಸೀಟುಗಳ ಕೋಟಾವನ್ನು ಪಡೆದು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರವು ವೈದ್ಯಕೀಯ, ಇಂಜಿನಿಯರಿಂಗ್, ಬಯೋಟೆಕ್ನಾಲಜಿ, ಬಿ.ಎಸ್ಸಿ., (ನರ್ಸಿಂಗ್) ಮತ್ತು ದಂತ ವೈದ್ಯಕೀಯ ಇತ್ಯಾದಿ ವಿವಿಧ ಕೋರ್ಸುಗಳಲ್ಲಿ ಆಂಗ್ಲೋ ಇಂಡಿಯನ್ಸ್‌ಗೆ ವ್ಯಾಸಂಗ ಮಾಡಲು ಕೋಟಾ ಸೀಟುಗಳನ್ನು ಹೆಚ್ಚಿಸಿ ಏಕೆ ಅವಕಾಶವನ್ನು ನೀಡಬಾರದು ?

ಶ್ರೀ ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :–

ಅ) ಇಲ್ಲ ಉದ್ಭವಿಸುವುದಿಲ್ಲ

642 (283) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) :–ವೈದಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಜಾತಿ ಅಲ್ಪಸಂಖ್ಯಾತ ಮತ್ತು ಭಾಷಾ ಅಲ್ಪಸಂಖ್ಯಾತ ಕಾಲೇಜುಗಳಿಗೆ ಸರ್ಕಾರವು ಸೀಟ್ ಮ್ಯಾಟ್ರಿಕ್ಸ್ ನೀಡಲಾಗಿತ್ತು (ಕಾಲೇಜುವಾರು ವಿವರ ನೀಡುವುದು) ?

ಶ್ರೀ ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :–

ವೈದ್ಯಕೀಯ ಕಾಲೇಜುಗಳು

ಅ)	ಧಾರ್ಮಿಕ ಅಲ್ಪಸಂಖ್ಯಾತ	...	3
	ಭಾಷಾ ಅಲ್ಪಸಂಖ್ಯಾತ	...	7
	ದಂತ ವೈದ್ಯಕೀಯ ಕಾಲೇಜುಗಳು		
	ಧಾರ್ಮಿಕ ಅಲ್ಪಸಂಖ್ಯಾತ	...	3
	ಭಾಷಾ ಅಲ್ಪಸಂಖ್ಯಾತ	...	9